**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ, ರಾಯಚೂರು**

**ಸಿ.ಸಿ. ಸಂಖ್ಯೆ - 594/2023**

ರಾಜ್ಯಪರ ಮಾರ್ಕೆಟ್ಯಾರ್ಡ ಪೊ.ಠಾ ಃವಿಃ ಜಿ.ಓಂಕಾರಗೌಡ ಮತ್ತು ಇತರರು

ನಾನು ಶ್ರೀಮತಿ ಮಮತ.ಡಿ., ಬಿ.ಎಸ್ಸಿ, ಎಲ್ಎಲ್.ಬಿ., ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಸಿಜೆಎಂ, ರಾಯಚೂರು ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಪ್ಪಾಡುತ್ತೇನೆ.

**ಆರೋಪಿತರ ಸಂಖ್ಯೆಃ**

1. ಜಿ.ಓಂಕಾರಗೌಡ ಉರ್ಫ ಓಂಕಾರ ತಂದೆ ಜಿ.ವೀರನಗೌಡ, 38 ವರ್ಷ, ವ್ಯಾಪಾರ, ಸಾಃ ಎಲ್.ಬಿ.ಎಸ್ ನಗರ, ರಾಯಚೂರು.
2. ಜಂಬಣ್ಣ ತಂದೆ ಹನುಮಂತಪ್ಪ, 41 ವರ್ಷ, ವ್ಯಾಪಾರ, ಸಾಃ ಮ.ನಂ.12-06385/18/1, ಚಂದ್ರ ಬಂಡ ರಸ್ತೆ, ರಾಯಚೂರು.
3. ಹನುಮಂತರಾಯ ತಂದೆ ಮಲ್ಲರೆಡ್ಡಪ್ಪ, 43 ವರ್ಷ, ವ್ಯಾಪಾರ, ಸಾಃ ಮ.ನಂ.12-06-1025/84/, ಪೋತಗಲ್ ಕ್ರಾಸ, ರಾಯಚೂರು.
4. ರಮೇಶ ರೆಡ್ಡಿ ತಂದೆ ಹನುಮಂತ ಬೆಲ್ದಾರ, 41 ವರ್ಷ, ಕೂಲಿ, ಸಾಃ ಮ.ನಂ.12-06-1237, ಎಲ್.ಬಿ.ಎಸ್ ನಗರ, ರಾಯಚೂರು.
5. ಆ.9 ವೆಂಕಟೇಶ ತಂದೆ ಭೀಮಣ್ಣ, 36 ವರ್ಷ, ಕೂಲಿ, ಮ.ನಂ.12-6-1237/529, ಎಲ್.ಬಿ.ಎಸ್ ನಗರ, ರಾಯಚೂರು.

# ದೋಷಾರೋಪಣೆ

ದಿನಾಂಕ 12-11-2022 ರಂದು ಬೆಳಿಗ್ಗೆ 09.10 ಗಂಟೆಗೆ 1 ನೇ ಆರೋಪಿತನಾದ ನೀನು ಚಂದ್ರಬಂಡ ರಸ್ತೆಯಲ್ಲಿ ಇರುವ ರಾಯಚೂರು ನಗರದ ವೀರಾಂಜನೇಯ್ಯ ಗುಡಿಯ ಗೇಟಿಗೆ ಬೀಗ ಹಾಕಿಕೊಂಡು ಹೋಗಿರುತ್ತಾರೆ ಅಂತಾ ಗೊತ್ತಾಗಿ ಚಾಸಾ-1 ಮತ್ತು 6 ರಿಂದ 13 ರವರು ಅಲ್ಲಿಗೆ ಹೋಗಿ ಚಾಸಾ-9 ರವರು ನಿನಗೆ ಕರೆ ಮಾಡಿ ಮತ್ತು ಶನಿವಾರ ಜನರು ಬರುತ್ತಾರೆ ಗೇಟ್ ಬೀಗ ತೆಗಿರಿ ಅಂತ ಕೇಳಿದ್ದಕ್ಕೆ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಚಾಸಾ -1, 6 ಮತ್ತು 7 ರವರ ಜೊತೆ ಜಗಳ ತೆಗೆದು ಆ ಮೂಲಕ ಭಾ.ದಂ.ಸಂ. ಕಲಂ 143 ಸಹ ಕಲಂ 149 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ .

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು ಬಂದು ಸಮಾನ ಉದ್ದೇಶದಿಂದ ಚಾಸಾ -1 ಮತ್ತು 6 ಮತ್ತು 7 ರವರ ಜೊತೆ ಜಗಳ ತಗೆದು ದೊಂಬಿ ಉಂಟು ಮಾಡಿ ಆ ಮೂಲಕ ಭಾ.ದಂ.ಸಂ. ಕಲಂ 147 ಸಹ ಕಲಂ 149 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು ಬಂದು ಸಮಾನ ಉದ್ದೇಶದಿಂದ ಕಲ್ಲು ಮತ್ತು ಕಟ್ಟಿಗೆಯನ್ನು ಹಿಡಿದುಕೊಂಡು ಬಂದು ಚಾಸಾ-1 ಮತ್ತು 6 ಮತ್ತು 7 ರವರ ಜೊತೆ ಜಗಳ ತಗೆದು ಆ ಮೂಲಕ ಭಾ.ದಂ.ಸಂ. ಕಲಂ 148 ಸಹ ಕಲಂ 149 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು ಬಂದು ಸಮಾನ ಉದ್ದೇಶದಿಂದ ಚಾಸಾ-1 ಮತ್ತು 6 ಮತ್ತು 7 ರವರಿಗೆ ಏನರಲೇ ಸೂಳೇ ಮಕ್ಕಳೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಆ ಮೂಲಕ ಭಾ.ದಂ.ಸಂ. ಕಲಂ 504 ಸಹ ಕಲಂ 149 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು ಬಂದು ಸಮಾನ ಉದ್ದೇಶದಿಂದ ಚಾಸಾ -6 ರವರಿಗೆ 1 ನೇ ಆರೋಪಿಯಾದ ನೀನು ಕಲ್ಲಿನಿಂದ ಬೆರಳಿಗೆ ಹೊಡೆದು, 2 ನೇ ಆರೋಪಿಯಾದ ನೀನು ಚಾಸಾ-6 ರವರಿಗೆ ಕಟ್ಟಿಗೆಯಿಂದ ತಲೆಗೆ ಹೊಡೆದು, 3 ನೇ ಆರೋಪಿಯಾದ ನೀನು ಚಾಸಾ-6 ರವರಿಗೆ ಕಟ್ಟಿಗೆಯಿಂದ ಮೊಣಕಾಲು ಕೆಳಗೆ ಹೊಡೆದು ಅ ಮೂಲಕ ಭಾ.ದಂ.ಸಂ. ಕಲಂ 324 ಸಹ ಕಲಂ 149 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು ಬಂದು ಸಮಾನ ಉದ್ದೇಶದಿಂದ ಚಾಸಾ -7 ರವರಿಗೆ 4 ನೇ ಆರೋಪಿಯಾದ ನೀನು ಬಲಗೈ ಹಿಡಿದು ತಿರುವಿ ಮತ್ತು 9 ನೇ ಆರೋಪಿತನಾದ ನೀನು ಚಾಸಾ-

7 ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದು ಅ ಮೂಲಕ ಭಾ.ದಂ.ಸಂ. ಕಲಂ 323 ಸಹ ಕಲಂ 149 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು ಬಂದು ಸಮಾನ ಉದ್ದೇಶದಿಂದ ಚಾಸಾ -1 ಮತ್ತು 6 ಮತ್ತು 7 ರವರಿಗೆ ಸುಮ್ಮನೆ ಹೋದರೆ ಒಳ್ಳೆದಾಯಿತು ಇಲ್ಲವಾದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಅಂತ ಜೀವದ ಬೆದರಿಕೆ ಹಾಕಿ ಆ ಮೂಲಕ ಭಾ.ದಂ.ಸಂ. ಕಲಂ 506 ಸಹ ಕಲಂ 149 ರಡಿಯಲ್ಲಿ ಅಪರಾಧವನ್ನು ವೆಸಗಿರುವಿರಿ.

ಆದ್ದರಿಂದ ಸದರಿ ದೋಷಾರೋಪಣೆಯ ಸಂಬಂಧ ಈ ನ್ಯಾಯಾಲಯ ದಿಂದ ನಿಮ್ಮ ಮೇಲೆ ವಿಚಾರಣೆಯಾಗಬೇಕೆದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**ದಿನಾಂಕಃ 27.11.2023**

**ಪ್ರಧಾನ ಹಿರಿಯ ಸಿವಿಲ್ ಮತ್ತು** ಸಿಜೆಎಂ,ರಾಯಚೂರು